ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ.

**ಸಿ.ಸಿ.ನಂ.:1132/2023**

ದೂರುದಾರರು — ರಾಜ್ಯದ ಪರವಾಗಿ ಆರಕ್ಷಕ ನಿರೀಕ್ಷಕರು, ಸಂಚಾರ ಪೊಲೀಸ್ ಠಾಣೆ, ಹೊಸಪೇಟೆ, ವಿಜಯನಗರ ಜಿಲ್ಲೆ.

- ವಿರುದ್ಧ -

ಆಪಾಧಿತ - 2. ರಾಮ ರಾವ್ ಕೆ. ತಂದೆ ಸುಬ್ಬಾ ರಾವ್ ಕೆ., ವಯಸ್ಸು 52 ವರ್ಷ, ವಾಸಃ ರಾಮದೇವರ ಗುಡಿ ಹತ್ತಿರ, ಶಿವಪುರ ಗ್ರಾಮ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ.

# ಆಪಾದನೆ

ದಿನಾಂಕಃ 15.08.2023 ರಂದು ಬೆಳಿಗ್ಗೆ 11-30 ಗಂಟೆ ಸುಮಾರಿಗೆ ಸಾಕ್ಷಿ-3 ರವರು ಹೊಸಪೇಟೆ ನಗರದ ಎನ್.ಹೆಚ್-50 ರಸ್ತೆಯಲ್ಲಿ ಶ್ರೀ ಶನೇಶ್ವರ ಗುಡಿ ಹತ್ತಿರ ಇರುವ ಆರ್.ಟಿ.ಓ. ಚೆಕ್ ಪೋಸ್ಟ್ ಹತ್ತಿರ ಮೋಟಾರ್ ಸೈಕಲ್ ನಲ್ಲಿ ಹೋಗುತ್ತಿರುವಾಗ, ಅದೇ ಸಮಯದಲ್ಲಿ ಸಾಕ್ಷಿ-3 ರವರ ಹಿಂದುಗಡೆಯಿಂದ ಶ್ರೀ ಶನೇಶ್ವರ ಗುಡಿ ಕಡೆಯಿಂದ 2 ನೇ ಆರೋಪಿಯಾದ ನೀನು ಇನೋವಾ ಕಾರ್ ನಂಃಕೆಎ-37 ಎನ್-7789 ನೇದ್ದನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ಸಾಕ್ಷಿ-3 ರವರ ಮೋಟಾರ ಸೈಕಲ್ ಗೆ ಓವರ್ ಟೇಕ್ ಮಾಡಿಕೊಂಡು ಮುಂದುಗಡೆ ಹೋಗಿದ್ದು, ಆದೇ ಸಮಯದಲ್ಲಿ ಸಾಕ್ಷಿ-3 ರವರ ಹಿಂದುಗಡೆಯಿಂದ ಆರೋಪಿ-1 ರವರು ನಂಬರ್ ಪ್ಲೇಟ್ ಅಳವಡಿಸದ ಯಮಹ ಮೋಟಾರ್ ಸೈಕಲ್ ಸಂಃ ಕೆಎ-36 ಇ-6943 ಚಾಸಿ ಸಂಃ 1L1428553 ಇಂಜಿನ್ ನಂಃ1L1428553 ನೇದ್ದರ ಹಿಂಬದಿಯಲ್ಲಿ ಸಾಕ್ಷಿ-2 ರವರನ್ನು ಕೂಡಿಸಿಕೊಂಡು ಮೋಟಾರ್ ಸೈಕಲ್ ನ್ನು ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೊಸಪೇಟೆ ನಗರದ ಎನ್.ಹೆಚ್-50 ರಸ್ತೆಯಲ್ಲಿ ಆರ್.ಟಿ.ಓ. ಚೆಕ್ ಪೋಸ್ಟ್ ಹತ್ತಿರ ಇರುವ ಓವರ್ ಹೆಡ್ ವಾಟರ್ ಟ್ಯಾಂಕ್ ಹತ್ತಿರ ಹೋಗುತ್ತಿರುವಾಗ, ಅದೇ ಸಮಯದಲ್ಲಿ ಅವರ ಮುಂದುಗಡೆ ವೇಗವಾಗಿ ಹೋಗುತ್ತಿದ್ದ 2 ನೇ ಆರೋಪಿಯಾದ ನೀನು ನಿನ್ನ ಮುಂದುಗಡೆ ಏಕಾಏಕಿ ಯಾವುದೋ ನಾಯಿ ರಸ್ತೆಯಲ್ಲಿ ಅಡ್ಡ ಬಂದಿದ್ದರಿಂದ ಏಕಾಏಕಿ ನಿರ್ಲಕ್ಷ್ಯತನದಿಂದ ನಿಮ್ಮ ಕಾರಿನ ಬ್ರೇಕ್ ಹಾಕಿ ನಿಲ್ಲಿಸಿದ್ದರಿಂದ, ಅದೇ

ಸಮಯದಲ್ಲಿ ನಿಗದಿತ ಅಂತರವನ್ನು ಬಿಡದೇ ಆರೋಪಿ-1 ರವರು ಮೋಟಾರ್ ಸೈಕಲ್ ನ್ನು ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ 2 ನೇ ಆರೋಪಿಯಾದ ನೀನು ನಿಲ್ಲಿಸಿದ್ದ ಕಾರಿನ ಹಿಂಭಾಗಕ್ಕೆ ರಭಸವಾಗಿ ಡಿಕ್ಕಿ ಪಡಿಸಿ ಅಪಘಾತವನ್ನುಂಟು ಮಾಡಿದ್ದು, ಆ ಮೂಲಕ **2** ನೇ ಆರೋಪಿಯಾದ ನೀನು ಭಾ.ದಂ.ಸಂ.**279** ನೇದ್ದರ ಅಡಿಯಲ್ಲಿ ಅಪರಾಧ ಮಾಡಿರುತ್ತಿಯಾ ಎಂದು ಆರೋಪ ಮಾಡಲಾಗಿದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2 ನೇ ಆರೋಪಿಯಾದ ನೀನು ಈ ಮೇಲೆ ತಿಳಿಸಿದ ರೀತಿಯಲ್ಲಿ ಅಪಘಾತಪಡಿಸಿದ ಪರಿಣಾಮ, ಸಾಕ್ಷಿ-2 ರವರಿಗೆ ಸಾದಾ ಸ್ವರೂಪದ ಗಾಯಗಳಾಗಿದ್ದು, ಆ ಮೂಲಕ **2** ನೇ ಆರೋಪಿಯಾದ ನೀನು ಭಾ.ದಂ.ಸಂ.**337** ನೇದ್ದರ ಅಡಿಯಲ್ಲಿ ಅಪರಾಧ ಮಾಡಿರುತ್ತೀಯಾ ಎಂದು ಆರೋಪ ಮಾಡಲಾಗಿದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2 ನೇ ಆರೋಪಿಯಾದ ನೀನು ಈ ಮೇಲೆ ತಿಳಿಸಿದ ರೀತಿಯಲ್ಲಿ ಅಪಘಾತಪಡಿಸಿದ ಪರಿಣಾಮ, 1 ನೇ ಆರೋಪಿಗೆ ತೀವ್ರ ಸ್ವರೂಪದ ಗಾಯಗಳಾಗಿ, ದಿನಾಂಕ 16.08.2023 ರಂದು ರಾತ್ರಿ 9-30 ಗಂಟೆಗೆ ಹುಬ್ಬಳ್ಳಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಆ ಮೂಲಕ **2** ನೇ ಆರೋಪಿಯಾದ ನೀನು ಭಾ.ದಂ.ಸಂ.**304(ಎ)** ನೇದ್ದರ ಅಡಿಯಲ್ಲಿ ಅಪರಾಧ ಮಾಡಿರುತ್ತೀಯಾ ಎಂದು ಆರೋಪ ಮಾಡಲಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2 ನೇ ಅರೋಪಿಯಾದ ನೀನು ಇನೋವಾ ಕಾರ್ ನಂಃಕೆಎ-37 ಎನ್-7789 ನೇದ್ದನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಅಪಘಾತ ಮಾಡಿ, ಆ ಮೂಲಕ 2 ನೇ ಆರೋಪಿಯಾದ ನೀನು ಕಲಂ **183** ಐಎಂವಿ ಕಾಯ್ದೆ ಯ ಅಡಿಯಲ್ಲಿ ಅಪರಾಧ ಮಾಡಿರುತ್ತೀಯಾ ಎಂದು ಆರೋಪ ಮಾಡಲಾಗಿದೆ.

ಪ್ರಶ್ನೆ - 1. ನೀನು ಮೇಲೆ ಹೇಳಿರುವ ಆಪಾಧನೆಯನ್ನು ಅರ್ಥ ಮಾಡಿಕೊಂಡಿದ್ದೀಯಾ?

ಉತ್ತರ- ಆ-2

ಪ್ರಶ್ನೆ - 2. ನೀನು ಆಪಾದನೆಯನ್ನು ಒಪ್ಪಿಕೊಳ್ಳುತ್ತೀಯಾ ಅಥವಾ ನಿನ್ನ ಪರವಾಗಿ ಪ್ರತಿರಕ್ಷಣೆ ಇದೆಯಾ?

ಉತ್ತರ- ಆ-2

(ಆಪಾದಿತನ ಹೇಳಿಕೆಯನ್ನು ನನ್ನ ಸಮ್ಮುಖದಲ್ಲಿ ಪಡೆದುಕೊಂಡಿದ್ದು, ಸದರಿ ಹೇಳಿಕೆಯು ಆಪಾಧಿತನ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಯನ್ನು ಒಳಗೊಂಡಿರುತ್ತದೆ.)

ದಿಃ 13.03.2024.

ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾ.ದಂ. ಹೊಸಪೇಟೆ.